**Mysooru Mitra**

Date: Feb 02, 2016 Page No. 2

Edition: Mysore Language: Kannada

# ‘ಅಂತರ್ಜಾಲದ ತಟಸ್ಥತೆ, ಉಚಿತ ಮೂಲಭೂತ ತತ್ವಗಳು’ ಕುರಿತು ಸಂವಾದ




‘ಅಂತರ್ಜಾಲದ ತಟಸ್ಥತೆ ಹಾಗೂ ಉಚಿತ ಮೂಲಭೂತ ತತ್ವಗಳು’ ವಿಷಯ ಕುರಿತು ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಡಾ. ಶಾಲಿನಿ ಆರ್.ಅರಸ್ ಮಾತನಾಡುತ್ತಿರುವುದು. ಚಿತ್ರದಲ್ಲಿ (ಎಡದಿಂದ) ಡಾ. ಸುಧೀರ್ ಸೋಸಲೆ, ಎನ್. ವಿ. ಸತ್ಯನಾರಾಯಣ, ಕಲ್ಪೇಶ್ ಮೆಹ್ತಾ ಅವರನ್ನು ಕಾಣಬಹುದು.

ಮೈಸೂರು,ಫೆ.1(ನಕು)– ಮೈಸೂರ್ ಯೂನಿವರ್ಸಿಟಿ ಇನ್ಫರ್ಮೇಷನ್ ಅಂಡ್ ಲೈಬ್ರರಿ ಸೈನ್ಸ್ ಅಲುಮ್ನಿ ನೆಟ್ವರ್ಕ್ (ಮಿಲನ್) ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ (ಎಸ್‌ಡಿಎಂಐಎಂಡಿ) ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಸೋಮವಾರ ‘ಅಂತರ್ಜಾಲದ ತಟಸ್ಥತೆ ಹಾಗೂ ಉಚಿತ ಮೂಲಭೂತ ತತ್ವಗಳು’ ವಿಷಯ ಕುರಿತು ಸಂವಾದ ನಡೆಸಲಾಯಿತು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸಂವಾದದಲ್ಲಿ ವಿವಿಧ ಕ್ಷೇತ್ರದ ತಜ್ಞರು, ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು. ಎಸ್‌ಎಂಐಎಂಡಿ ಕಾಲೇಜಿನ ಸ್ನಾತಕೋತ್ತರ ಡಿಪ್ಲೊಮಾ ನಿರ್ವಹಣೆ ವಿಭಾಗದ ಮುಖ್ಯಸ್ಥೆ ಪ್ರೊ. ಮಾಲತಿ ಶ್ರೀರಾಮ್ ನಡೆಸಿಕೊಟ್ಟರು.

ಗ್ರಾಹಕರು ಅಂತರ್ಜಾಲ ಪುಟಗಳನ್ನು ಪ್ರವೇಶಿಸಲು ಬೇರೆ ಬೇರೆ ಶುಲ್ಕಗಳನ್ನು ನಿಗದಿಪಡಿಸಿರುವುದನ್ನು ಅಂತರ್ಜಾಲದ ತಟಸ್ಥತೆ ಎನ್ನಲಾಗುತ್ತದೆ. ಇದನ್ನು ಅಂತರ್ಜಾಲ ತಟಸ್ಥೆ ಕಾರ್ಯಕರ್ತರು ವಿರೋಧಿಸುತ್ತಿದ್ದಾರೆ. ಫೇಸ್‌ಬುಕ್‌ನ ಹೊಸ ಅವತಾರವಾಗಿ ಫ್ರೀ ಬೇಸಿಕ್ಸ್ ಬಂದಿದೆ. ಇದನ್ನು ಕುರಿತಾದ ವಿವಾದಗಳು ಚರ್ಚೆಯಾಗುತ್ತಿದೆ. ಟೆಲಿಕಾಂ ಅಥಾರಿಟಿ ಆಫ್ ಇಂಡಿಯಾ (TRAI) ಯು ಭಾರತದೇಶದ ನೀತಿ ನಿರೂಪಣೆಯ ವಿಷಯದಲ್ಲಿ ಫ್ರೀ ಬೇಸಿಕ್ಸ್ ಅಪಾಯಕಾರಿಯಾಗಲಿದೆ ಎಂದು ತನ್ನ ಅಭಿಪ್ರಾಯ ಮಂಡಿಸಿದೆ. ಈ ಸನ್ನಿವೇಶದಲ್ಲಿ, ಅಂತರ್ಜಾಲವನ್ನು ಉಪಯೋಗಿಸುವವರು ಮೇಲಿನ ವಿಷಯದ ಬಗ್ಗೆ ಗೊಂದಲದಲ್ಲಿದ್ದಾರೆ. ಹೀಗಾಗಿ ವಿಷಯ ಕುರಿತು ಇಂದು ಸಂವಾದ ನಡೆಸಲಾಯಿತು.

ಸಂವಾದದಲ್ಲಿ ಇನ್ಫರ್ಮ್ಯಾಟಿಕ್ಸ್ ಇಂಡಿಯಾ ಲಿಮಿಟೆಡ್‌ನ ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕ ಎನ್. ವಿ. ಸತ್ಯನಾರಾಯಣ, ಮೈಸೂರು ವಿಶ್ವವಿದ್ಯಾನಿಲಯದ ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಇನ್ಫರ್ಮೇಷನ್ ಮ್ಯಾನೇಜ್‌ಮೆಂಟ್‌ನ ಕಾರ್ಯನಿರ್ವಾಹಕ ನಿರ್ದೇಶಕಿ ಡಾ. ಶಾಲಿನಿ ಆರ್.ಅರಸ್, ಎನ್‌ಐಇ ಕಾಲೇಜಿನ ಸೆಂಟರ್ ಫಾರ್ ಟ್ರೈನಿಂಗ್ ಇನ್ ಅಡ್ವಾನ್ಸ್ಡ್ ಟೆಕ್ನಾಲಜೀಸ್ ವಿಭಾಗದ ನಿರ್ದೇಶಕ ಡಾ.ಸುಧೀರ್ ಸೋಸಲೆ, ಸ್ಟಾರ್ ಸಾಫ್ಟ್– ಇಂಡಿಯಾದ ಸ್ಥಾಪಕ ಕಲ್ಪೇಶ್ ಮೆಹ್ತಾ ಪಾಲ್ಗೊಂಡು ತಮ್ಮ ಅಭಿಪ್ರಾಯ ಮಂಡಿಸಿದರು.

**Panel Discussion on ‘Net Neutrality Vs Free Basics’**